ರಾಜ್ಯದಲ್ಲಿ ಸಿ. ಓ. ಡಿ. ಗೆ ನೀಡಲಾದ ಪ್ರಕರಣಗಳ ಸಂಖ್ಯೆ

99 (881) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ಸಿ.ಓ.ಡಿ.ಗೆ ನೀಡಲಾಗಿದೆ? (ವಿಸ್ತಾರವಾದ ಮಾಹಿತಿ)

ಆ) ಎಷ್ಟು ಪ್ರಕರಣಗಳಲ್ಲಿ ವರದಿ ಬಂದಿದೆ?

ಇ) ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ಸಿ.ಬಿ.ಐ.ತನಿಖೆಗೆ ನೀಡಿದೆ (ವಿಸ್ತಾರವಾದ ಮಾಹಿತಿ)

ಈ) ಎಷ್ಟು ಪ್ರಕರಣಗಳಲ್ಲಿ ವರದಿ ಬಂದಿದೆ? (ಯಾವ ಯಾವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) 1990 ರಿಂದ ಫೆಬ್ರವರಿ 2000 ದವರೆಗೆ ಸಿ.ಓ.ಡಿ.ಗೆ ವಹಿಸಿರುವ ಪ್ರಕರಣಗಳ ವಿವರ ಈ ಕೆಳಗಿನಂತಿದೆ:

ತನಿಖೆಗಾಗಿ	:	8039
ವಿಚಾರಣೆಗಾಗಿ	:	741
ಒಟ್ಟು		**8780**

ವಿವರಗಳು ಹೆಚ್ಚಾಗಿರುವುದರಿಂದ ಅವುಗಳನ್ನು ಸದಸ್ಯರಿಗೆ ನಂತರ ಒದಗಿಸಲಾಗುವುದು.

ಆ) 8479 ಪ್ರಕರಣಗಳಲ್ಲಿ ವರದಿಗಳು ಬಂದಿದ್ದು ಅವು ಈ ಕೆಳಗಿನಂತಿದೆ:

ತನಿಖೆಯಾದದ್ದು	:	7787
ವಿಚಾರಣೆಯಾದದ್ದು	:	692

ವಿವರಗಳು ಹೆಚ್ಚಾಗಿರುವುದರಿಂದ ಅವುಗಳನ್ನು ಸದಸ್ಯರಿಗೆ ನಂತರ ಒದಗಿಸುವುದು.

ಇ) 15 ಪ್ರಕರಣಗಳು (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಈ) 2 ಪ್ರಕರಣಗಳಲ್ಲಿ ವರದಿ ಬಂದಿದ. ಉಳಿದಂತೆ ಸಿ.ಬಿ.ಐ.ಗೆ ಪತ್ರ ಬರೆದಿದ್ದು ವರದಿ ನೀರಿಕ್ಷಿಸಲಾಗಿದೆ.

ANNEXURE - A

CASES REFERRED TO CBI BY THE GOVERNMENT OF KARNATAKA

Sl. No.	File No.	Subject	Date referred to CBI	CBI reference No.	Remarks
1	2	3	4	5	6
1	HD 21 PCR 90	Illegal transaction of large quanti ties of Arms and animation byS.P. Ranga Reddy and Sushil kumar of Hyderabad.	27-12-90		
2	HD 112 PCR 90	Bank employees of different Bank are Cheating Banks by stealing drafts and encashing under fictious name	14-2-91	No.6447/1/5/90 SW/ BLR Dtd:10.10.90	
3	HD 50 PCR 93	Clash between Lingayat and SC communi-ties in Badanavalu village of Nanjangud Taluk of Mysore Districit.	22-4-93	No. 4597C5/3/ 12/93-CBI/BLR Dtd.15.6.95	Charge sheet submitted to the court.
4	HD 83 PCR 93	Distrubance on 26th April 1993 at Nanjan-gud Town and Ummathur Village of Cha-marajanagar taluk, Mysore Dist.	4-5-93		
5	DPAR 36 MMC 93	Irregularities in purchase of classic computer by Government of Karnataka	19-3-93		

1	2	3	4	5	6
6	HD 89 PCR 95	CBI Investigation against Sri. Nagalingiah, 1Manager Srirampura co-operative Bank in cr-No. 153/93 of Srirampura police Station, Bangalore	25-8-95	DP/11666/RC/BGA 1993/A0029 Dtd : 7-12-99	
7	HD 58 PCR 96	Murder of Dr. U. Chittaranjan, M.L.A Bhatkala on 10the April 1996	25-5-96	DPJS 2 1999/01432 3/5(s) 96-SCB-CME SC-11 Dtd : 23-12-99	
8	HD 156 PCR 96	Fradulent message from Central Tele-			25-
9-96	DP/11581/RC/BGA/				
graphic office, Bangalore to chase				1998/A0015, Dtd: 3-12-99	
		Mahattan Bank, Singapur for transfer of U and D Rs.92,5000to Industrial Conmer cial Bank, Singapur, Jhujja Branch, Beni ficing Jana Exchange (Canara Bank, Fore ign Dept. Residency Road, Bangalore)			
9	HD 273 PCR 96	Encashment of Rs.8,84000 at Syndicate Bank, Charmarajpet Branch Bangalore in the name of Swestic Metal Corporation and Rs 3,92000 in the name of Balaji Metal Corporation in Canara Bank, Chickpet Police	21-12-96	DP30-02-02000/00/776 1/40/97-BSFC-LO Dt.27/28-3-2000.	
Station, Bangalore by Sri Deepak by stealing					

two demand drafts belongs to Bank of India,

1	2	3	4	5	6
10	HD 89 PCR 97	Illeged irregularities in the admission to the	2-4-97		
11	HD 129 PCR 97	Alleged irregularities in Bangalore District and Bangalore Rural District Central Co-operative Bank Ltd. B'lore.	10-6-97	D.O.No.2527/2/1 (E)/98/CBI/BLr dt. 20-9-99.	
12	HD 121 PCR 98	Increases of political assessinations in Gulbarga District (4 cases)	20.10.99		
13	HD 27 PCR 99	Large Scale Conspiracy in whcih Fake contract procurrement to under a fake project was prepared for supply of items by M/s South End Technology on behalf of defence Reasearch Development organisations.	17-11-99	No.314(E)CHN/EOW-11 302 dt.21-6-99	
14	HD 221 PCR 99	Fradulent transactions of Bank of India Service Branch, Bangalore-9.	19-11-99	CR/BGA/1999/A/0048 37 dt.24 -2-2000.	
15	HD 54 PCR 2000	Trap case against Sri G.H.Kulkarni, Divisional Engineer Telecom Dept. in connection of supply of Bricks to Tele com Department.	13-3-2000	Copy of the CBI letter enclosed.	

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, 1990ನೇ ಇಸವಿಯಿಂದ 2000ನೇ ಇಸವಿಯವರೆಗೆ 8780 ಪ್ರಕರಣಗಳನ್ನು ಸಿ.ಓ.ಡಿ.ಗೆ ವಹಿಸಲಾಗಿದೆ ಮತ್ತು ಅದರಲ್ಲಿ 8479 ಪ್ರಕರಣಗಳಲ್ಲಿ ತನಿಖಾ ವರದಿ ಅಥವಾ ವಿಚಾರಣಾ ವರದಿ ಸರ್ಕಾರಕ್ಕೆ ಬಂದಿದೆ ಎನ್ನುವಂತಹ ಮಾಹಿತಿಯನ್ನು ಸರ್ಕಾರ ಹೇಳಿದೆ. ಈ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಸರ್ಕಾರ ಚಾರ್ಜ್‌ಷೀಟ್ ಹಾಕಿದೆ ಮತ್ತು ಎಷ್ಟು ಮೊಕದ್ದಮೆಗಳು ಇತ್ಯರ್ಥವಾಗಿದೆ ಮತ್ತು ಇದುವರೆಗೆ ಎಷ್ಟು ಜನಕ್ಕೆ ಶಿಕ್ಷೆಯಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಸಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸಿ.ಓ.ಡಿ. ಸ್ವಯಂ ಆಗಿ ತನಿಖೆಗೆ ತೆಗೆದುಕೊಂಡ ಕ್ರಿಮಿನಲ್ ಮೊಕದ್ದಮೆಗಳಲ್ಲಿ 6835 ವರದಿಯಾಗಿದ್ದು ಅದರಲ್ಲಿ 6752 ವಿಲೇವಾರಿಯಾಗಿವೆ. ಇದರಲ್ಲಿ ಬಾಕಿ ಇರತಕ್ಕದ್ದು 83 ಪ್ರಕರಣಗಳು ಮಾತ್ರ. ಈ ಪ್ರಕರಣಗಳಲ್ಲಿ ಮಾತ್ರ ಚಾರ್ಜ್‌ಷೀಟ್ ಹಾಕುವುದು ಬಾಕಿ ಉಳಿದಿದೆ. 1998ರಲ್ಲಿ 3 ಕೇಸ್, 1999ರಲ್ಲಿ 38 ಮತ್ತು 200ರಲ್ಲಿ 42 ಹೀಗೆ ಒಟ್ಟು 83 ಕೇಸ್‌ಗಳಲ್ಲಿ ಮಾತ್ರ ಚಾರ್ಜ್‌ಷೀಟ್ ಹಾಕುವುದು ಬಾಕಿ ಉಳಿದಿದೆ. ಡಿ.ಜಿ. ಮತ್ತು ಐ.ಜಿ.ಪಿ. ಯವರ ಸಲಹೆ ಮೇರೆಗೆ ತೆಗೆದುಕೊಂಡತಂಹ ಸುಮಾರು 531 ಪ್ರಕರಣಗಳಲ್ಲಿ 488 ಪ್ರಕರಣಗಳು ವಿಲೇವಾರಿಯಾಗಿವೆ. ಇದರಲ್ಲಿ ಇನ್ನು 43 ಪ್ರಕರಣಗಳಲ್ಲಿಚಾರ್ಜ್‌ಷೀಟ್ ಹಾಕುವುದು ಅಥವಾ ಇನ್ನೂ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಇರುವುದು ಬಾಕಿ ಇದೆ. ಡಿ.ಜಿ ಮತ್ತು ಐ.ಜಿ.ಪಿಯವರು ಕಳೆದ ಹತ್ತು ವರ್ಷಗಳಲ್ಲಿ ಸಿ.ಓ.ಡಿಗೆ ವಹಿಸಿದ್ದ ಸುಮಾರು 210 ಪ್ರಕರಣಗಳಲ್ಲಿ 204 ವಿಲೇವಾರಿಯಾಗಿದೆ. 6 ಕೇಸ್‌ಗಳು ಮಾತ್ರ ಇದರಲ್ಲಿ ಬಾಕಿ ಉಳಿದಿದೆ. 1998ರಲ್ಲಿ 1, 1999ರಲ್ಲಿ 4 ಮತ್ತು 2000ದಲ್ಲಿ 1 ಹೀಗೆ ಒಟ್ಟು 6 ಕೇಸ್‌ಗಳು ಬಾಕಿ ಇವೆ. 15 ಪ್ರಕರಣಗಳು ಸಿ.ಬಿ.ಐ. ತನಿಖಾ ವ್ಯಾಪ್ತಿಯಲ್ಲಿ ಇವೆ. ಈ 15 ಪ್ರಕರಣಗಳನ್ನು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿದ್ದೇವೆ. ಈ 15 ಪ್ರಕರಣಗಳ ಪೈಕಿ2 ಪ್ರಕರಣಗಳ ಬಗ್ಗೆ ಮಾತ್ರ ನಮಗೆ ಮಾಹಿತಿ ಬಂದಿದೆ. ಉಳಿದ ಪ್ರಕರಣಗಳ ಬಗ್ಗೆ ನಮಗೆ ಮಾಹಿತಿ ಇನ್ನೂ ಕೂಡ ಲಭ್ಯವಾಗಿಲ್ಲ. ಈ ಪ್ರಕರಣಗಳಿಗೆ ಸಬಂಧಿಸಿದಂತೆ 120 ಪುಟಗಳ ಪುಸ್ತಕವೊಂದನ್ನು ತಯಾರು ಮಾಡಿ ಲೈಬ್ರರಿಯಲ್ಲಿ ನಾವು ಇಡುತ್ತಿದ್ದೇವೆ. ಅದರಲ್ಲಿ ಪ್ರತಿಯೊಂದು ಕೇಸ್ ಬಗ್ಗೆ ಅಂದರೆ 8780 ಕೇಸ್‌ಗಳ ಬಗ್ಗೆಯೂ ಕೂಡ ಸವಿಸ್ತಾರವಾಗಿ ಮಾಹಿತಿ ನೀಡಲಾಗಿದೆ. ಸಿ.ಓ.ಡಿ.ಗೆ ವಹಿಸಿಕೊಡಲಾಗಿದ್ದ 8780 ಪ್ರಕರಣಗಳಲ್ಲಿ ಯಾವ ಯಾವ ಪ್ರಕರಣಗಳು ಯಾವ್ಯಾವ ಕಾರಣಕ್ಕಾಗಿ ಯಾವ್ಯಾವ ಹಂತದಲ್ಲಿವೆ ಎಂಬ ಮಾಹಿತಿಯನ್ನು ನಾನು ಒದಗಿಸಿಕೊಡುತ್ತೇನೆ. ಈ ಮಾಹಿತಿಗಳುಳ್ಳ ಪುಸ್ತಕ 120 ಪುಟಗಳುಳ್ಳದ್ದಾಗಿರುವುದರಿಂದ ಅದನ್ನು ಎಲ್ಲಾ 224 ಮಾನ್ಯ ಸದಸ್ಯರುಗಳಿಗೂ ಕೂಡ ಹಂಚುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಆ ಪುಸ್ತಕವನ್ನು ಲೈಬ್ರರಿಯಲ್ಲಿ ಇಡುತ್ತೇವೆ. ಅದನ್ನು ಮಾನ್ಯ ಸದಸ್ಯರು ನೋಡಿಕೊಳ್ಳಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಎಷ್ಟು ಜನಕ್ಕೆ ಶಿಕ್ಷೆ ಆಗಿದೆ ಎಂಬುದರ ಬಗೆಗಿನ ಅಂಕಿ ಅಂಶಗಳನ್ನು ಅಥವಾ ಮಾಹಿತಿಗಳನ್ನು ಮಾನ್ಯ ಸಚಿವರು ಹೇಳಿದರೆ ಒಳ್ಳೆಯದು. ಅದರ ಜೊತೆಗೆ ಪ್ರತಿಯೊಂದು ಪ್ರಕರಣದಲ್ಲಿ 'ಆ್ಯಕ್ಷನ್ ಟೇಕನ್ 'ರಿಪೋರ್ಟ್' ಅನ್ನು ಏನಾದರೂ ಸಿ.ಓ.ಡಿ.ಯಲ್ಲಿ ದಾಖಲಾತಿ ಮಾಡಲಾಗುತ್ತಿದೆಯೇ? ಅದವಾ ಇಲ್ಲವೇ? ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಬೇರೆ ಬೇರೆ ಸಂದರ್ಭಗಳಲ್ಲಿ ನಾವು ಸದನದಲ್ಲಿ ಸಿ.ಬಿ.ಐ.ಗೆ ವಹಿಸಲಾದ ಪ್ರಕರಣಗಳ ತನಿಖೆಯಲ್ಲಿ ವಿಳಂಬವಾಗುತ್ತದೆ ಎಂದು ಹೇಳುತ್ತಿರುತ್ತೇವೆ. ಸಿ.ಬಿ.ಐ ತನಿಖೆಗೆ ವಹಿಸಲಾ ಗಿರುವ

ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸಿ ಅವುಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಬೇಕು ಎನ್ನುವುದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಸಿದೆಯೇ? ಇಲ್ಲವೇ? ಎನ್ನುವುದರ ಬಗ್ಗೆ ಸಹಾ ಮಾನ್ಯ ಸಚಿವರು ಸದನಕ್ಕೆ ಮಾಹಿತಿ ನೀಡಬೇಕೆಂದು ಕೋರುತ್ತೇನೆ. ಸಿ.ಓ.ಡಿ.ಗೆ ವಹಿಸಿತಕ್ಕಂಥ ಪ್ರಕರಣಗಳ ತನಿಖೆಯ ಪ್ರಗತಿಯನ್ನು ನೋಡಿದರೆ ಅದು ಚೆನ್ನಾಗಿ ಕೆಲಸ ಮಾಡು ತ್ತಿದೆ ಎಂದು ಅನ್ನಿಸುತ್ತದೆ. ಆದರೆ ಸಿ.ಓ.ಡಿ. ಬಗ್ಗೆ ಸಾರ್ವಜನಿಕ ಅಭಿಪ್ರಾಯವೇ ಬೇರೆ ಇದೆ. ಸಿ.ಓ.ಡಿ. ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಗಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಇದು ಏಕೆ ಹೀಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸಿ.ಓ.ಡಿ.ಗೆ ಚೆನ್ನಾಗಿ ಸರಿಯಾಗಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಈ ಅಂಕಿ ಅಂಶಗಳೇ ಸಾಕ್ಷಿಯಾಗಿವೆ. ಮಾನ್ಯ ಸದಸ್ಯರು ಕೇಳಿದಂತೆ 1990ನೇ ಇಸವಿಯಿಂದ ಎಷ್ಟು ಪ್ರಕರಣಗಳನ್ನು ಸಿ.ಓ.ಡಿಗೆ ವಹಿಸಲಾಗಿದೆ, ಇದರಲ್ಲಿ ಎಷ್ಟು ಕೇಸ್‌ಗಳಲ್ಲಿ ವರದಿಯಾಗಿವೆ? ಎಷ್ಟು ವಿಲೇವಾರಿಯಾಗಿವೆ ಮತ್ತು ಎಷ್ಟು ಪ್ರಕರಣಗಳು ಬಾಕಿಇವೆ ಎಂದು ಮಾಹಿತಿಯನ್ನು ಸರ್ಕಾರ ನೀಡಿದೆ. ಅದೇ ರೀತಿಯಲ್ಲಿ ಸಿ.ಬಿ.ಐ. ಗೆ ವಹಿಸಿದಂತಹ 15 ಪ್ರಕರಣಗಳಲ್ಲಿ 2 ಪ್ರಕರಣಗಳಲ್ಲಿ ಮಾತ್ರ ನಮಗೆ ವರದಿ ಬಂದಿದೆ ಎಂಬ ಮಾಹಿತಿಯನ್ನೂ ಕೂಡ ಮಾನ್ಯ ಸದಸ್ಯರಿಗೆ ತಿಳಿಸಿದ್ದೇವೆ. ಉಳಿದ ಪ್ರಕರಣಗಳು ಯಾವ್ಯಾವ ಸ್ಟೇಜ್‌ನಲ್ಲಿವೆ ಎಂಬ ಮಾಹಿತಿಯನ್ನು ಸಿ.ಬಿ.ಐ.ನವರು ನಮಗೆ ತಿಳಿಸಿದಾಗ ಮಾತ್ರ ನಮಗೆ ಗೊತ್ತಾಗುತ್ತದೆ. ಸಿ.ಬಿ.ಐ.ನವರು ತಮಗೆ ವಹಿಸಲಾದ ಪ್ರಕರಣಗಳ ಸಂಪೂರ್ಣವಾದ ತನಿಖೆಯಾದ ನಂತರವೇ ನಮಗೆ ಅವುಗಳ ಬಗ್ಗೆ ಮಾಹಿತಿ ನೀಡಿ ಅವುಗಳನ್ನು ನಮಗೆ ವಾಪಸ್ ಕಳುಹಿಸುತ್ತಾರೆ. ಆಗ ಮಾತ್ರವೇ ನಮಗೆ ಆ ಪ್ರಕರಣಗಳ ಡಿಸ್ಪೋಸ್ ಆಗಿವೆ ಅಥವಾ ಇಂತಹ ಸ್ಟೇಜ್‌ನಲ್ಲಿದೆ ಎಂಬುದು ಗೊತ್ತಾಗುತ್ತದೆ. ಪ್ರತಿ ಸಲ ನಾವು ಪತ್ರ ಬರೆದಾಗ ಅವರು ಪ್ರಕರಣಗಳು ಇಂಥಿಂಥ ಸ್ಟೇಜ್‌ಗಳಲ್ಲಿದೆ ಎಂದು ನಮಗೆ ತಿಳಿಸುವುದಿಲ್ಲ. ಏಕೆಂದರೆ ಆ ಪ್ರಕರಣದ ವಿಚಾರಣೆ ಸಂಪೂರ್ಣವಾಗಿ ಅವರ ಹತೋಟಿಯಲ್ಲಿರುತ್ತದೆ. ನಾನು ಈಗಾಗಲೇ ಹೇಳಿದಂತೆ ಸಿ.ಓ.ಡಿ.ಗೆ ವಹಿಸಲ್ಪಟ್ಟ ಪ್ರಕರಣಗಳ ಬಗೆಗಿನ ಮಾಹಿತಿಯನ್ನು ಒಳಗೊಂಡ ಪುಸ್ತಕವನ್ನು ಲೈಬ್ರರಿಯಲ್ಲಿ ಇಡುತ್ತೇವೆ. ಅದನ್ನು ಮಾನ್ಯ ಸದಸ್ಯರುಗಳು ನೋಡಿಕೊಳ್ಳಬಹುದು. ಸುಮಾರು 8780 ಕೇಸಗಳಿವೆ? ಆ ಪ್ರತಿಯೊಂದು ಕೇಸ್‌ಗಳೂ ಸಹಿತ ಯಾವ ಯಾವ ಹಂತಗಳಲ್ಲಿವೆ ಅವುಗಳ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ಮುಂತಾದ ಮಾಹಿತಿಗಳೆಲ್ಲವೂ ಕೂಡ ಅದರಲ್ಲಿ ಅಡಕವಾಗಿದೆ.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಉತ್ತರಹಳ್ಳಿ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿ ಸೈಟ್ ಹಂಚಿಕೆಯಲ್ಲಿ ಅವ್ಯವಹಾರವಾಗಿದೆ ಎಂದು ಸಿ.ಓ.ಡಿ ರಿಪೋರ್ಟ್ ಕೊಟ್ಟಿದೆ. ಅದು ತನ್ನ ವರದಿಯಲ್ಲಿ 14 ಸಾವಿರ ಸೈಟ್‌ಗಳಲ್ಲಿ 12 ಸಾವಿರ ಸೈಟ್‌ಗಳ ಹಂಚಿಕೆಯಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿದೆ. 1998ರಲ್ಲಿ ರಿಪೋರ್ಟ್ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅದರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕೆಂದು ನಾನು ಮಾನ್ಯ ಸಚಿವರನ್ನು ಕೋರು ತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಅದರ ಬಗ್ಗೆ ಗೊತ್ತಿಲ್ಲ. ನಾನು ಆಗಲೇ ಹೇಳಿದಂತೆ 8780 ಪ್ರಕರಣಗಳನ್ನು ಸಿ.ಓ.ಡಿ.ಗೆ ವಹಿಸಲಾಗಿದೆ. ಪ್ರತಿಯೊಂದು ಕೇಸಿನ ಬಗ್ಗೆ ನನಗೆ ಇಲ್ಲಿ ಹೇಳಲಾಗುವುದಿಲ್ಲ. ಎಲ್ಲಾ ಪ್ರಕರಣಗಳ ಮಾಹಿತಿಯನ್ನು ಲೈಬ್ರರಿಯಲ್ಲಿ ಇಡುತ್ತೇವೆ. ಅದನ್ನು ಮಾನ್ಯ ಸದಸ್ಯರು ಅವಲೋಕಿಸಬಹುದು.

ಅಧ್ಯಕ್ಷರು : ಮಾನ್ಯ ಸದಸ್ಯರು ಬೇಕಾದರೆ ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಅಬಕಾರಿ ವಾಣಿಜ್ಯ ತೆರಿಗೆ ಮತ್ತು ಮಿಸಲೇನಿಯಸ್ ಬಾಕಿ

177 (1559) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ : 1-2-2000ದವರಿಗೆ ಬಾಕಿ ಮತ್ತು ಇರುವ ಅಬಕಾರಿ ವಾಣಿಜ್ಯ ತೆರಿಗೆ ಮತ್ತು ಇತರೆ ಮಿಸಲೇನಿಯಸ್ ಬಾಕಿ ಎಷ್ಟು? ಕಳೆದ ಒಂದು ವರ್ಷದಲ್ಲಿ ಈ ಬಾಬ್ತುಗಳಲ್ಲಿ ವಸೂಲಾದ ಮೊತ್ತವೆಷ್ಟು?

2) ಬೆಂಗಳೂರು ನಗರ ಜಿಲ್ಲೆಯಲ್ಲಿ ವಿಶೇಷ ತಹಸೀಲ್ದಾರ್ ಹುದ್ದೆ ವಿಶೇಷವಾಗಿ ಸೃಷ್ಟಿಸಿದ್ದರೂ ಈ ಮಿಸಲೇನಿಯಸ್ ಬಾಕಿ ವಸೂಲಾಗದಿರಲು ಕಾರಣವೇನು? ಈ ಹುದ್ದೆಗಳನ್ನು ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1) ವಿವಿಧ ಶೀರ್ಷಿಕೆ ಅಡಿ ಭೂ ಕಂದಾಯ ಬಾಕಿ ಎಂದು ವಸೂಲಾಗಬೇಕಾಗಿರುವ ಮೊತ್ತವು ಈ ಕೆಳಕಂಡಂತಿದೆ.

ಕ್ರ. ಸಂ.	ಬಾಬ್ತುವಾರು	1.2.2000ಕ್ಕೆ ಬಾಕಿ (ಲಕ್ಷರೂಗಳಲ್ಲಿ)	ದಿ: 1-7-98ರಿಂದ 30.6.99ರವರೆಗೆ ವಸೂಲಿ (ಕಳೆದ ಕಂದಾಯ ವರ್ಷ) (ಲಕ್ಷರೂಗಳಲ್ಲಿ)
1)	ವಾಣಿಜ್ಯ ತೆರಿಗೆ	106.49	5.84
2)	ಅಬಕಾರಿ ತೆರಿಗೆ	312.05	71.49
3)	ಇತರೆ ಮಿಸ್‌ಲೇನಿಯಸ್ ಬಾಕಿ	817.16	140.04
	ಒಟ್ಟು:	**1235.70**	**217.37**

2) ಈ ಮೇಲಿನ ವಸೂಲಾತಿಯು ವಿಶೇಷ ತಹಸೀಲ್ದಾರರ ವಿಶೇಷ ಕಾರ್ಯಾಚರಣೆಯಿಂದ ಹಾಗೂ ಪ್ರಯತ್ನಗಳಿಂದ ವಸೂಲಾತಿಮಾಡಲು ಸಾಧ್ಯವಾಗಿರುತ್ತದೆ. ಈ ಹುದ್ದೆಗಳು ಇಲ್ಲದಿದ್ದಲ್ಲಿ ವಸೂಲಿ ಮಾಡಲು ಅನಾನುಕೂಲವಾಗುತ್ತದೆ. ವಿಶೇಷ ತಹಸೀಲ್ದಾರ್‌ರವರ ಹುದ್ದೆ ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.